ಸಿ ಸಿ ನಂಬರಃ 466/2015

ಪಿಡಬ್ಲ್ಯುಃ 1

ದಿನಾಂಕ 20-12-2019
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ವಿದ್ಯಾವರ್ಧಕ ಸಂಘದಲ್ಲ ಮೀಟಿಂಗ ಇರುವ ಕುರಿತು ನನಗೆ ಬಂದ ನೋಟಿಸ್ಸನ ಪ್ರತಿಯನ್ನು ನಾನು ತನಿಖಾಧಿಕಾರಿಯವರಿಗೆ ಕೊಟ್ಟಿಲ್ಲ. ನಾನು ಚೀಲಗಳನ್ನು ಹಿಡಿದುಕೊಂಡು ಹೋಗುತ್ತಿದ್ದೆ ಎಂದು ಹೇಳಿದ್ದು, ಅದು ಯಾವ ಚೀಲ ಹಾಗು ಅದರಲ್ಲಿ ಎನು ಇತ್ತು ಎಂದು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ನಿಜ. ಸದರಿ ಚೀಲದ ಬಣ್ಣ ಸಹ ನಾನು ಹೇಳಿಲ್ಲ.

ಆರೋಪಿತರನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿ ನೋಡುತ್ತಿದ್ದೇನೆ, ಅದಕ್ಕಿಂತ ಮುಂಚೆ ನಾನು ನೋಡಿಲ್ಲ ಎಂದರೆ ನಿಜ. ಪೋಲಿಸರಿಗೆ ನಾನು ಎಷ್ಟು ಗ್ರಾಮ ಬಂಗಾರ ಹಾಗು ಎಷ್ಟು ಕ್ಯಾರೆಟ್ ಇತ್ತು ಹಾಗು ಯಾವ ಡಿಜೈನ್‌ದ ಚೈನು ಇತ್ತು ಎಂದು ನಾನು ಹೇಳಿಲ್ಲ ಎಂದರೆ ನಿಜ. ಆರೋಪಿತರ ಚೆಹರಾ ಪಟ್ಟಿಯನ್ನು ಮತ್ತು ಅವರು ದಪ್ಪಗಿದ್ದಾರಾ ಹಾಗು ತೆಳ್ಳಗಿದ್ದಾರಾ ಎಂದು ಹೇಳಿಲ್ಲ ಎಂದರೆ ನಿಜ.

ಸಾಮಾನ್ಯವಾಗಿ ಚೈನನ್ನು ಕೊರಳಿಂದ ಕಿತ್ತರೆ ಅದು ತುಂಡಾಗಿ ಕೈಗೆ ಬರುತ್ತದೆ ಎಂದರೆ ನಿಜ. ಸಾಕ್ಷಿದಾರರಿಗೆ ನಿಪಿ 2 ರಂತೆ ಇರುವ ಮುಮಾ 1 ರ ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ಒಂದು ಚೈನನ ಒಂದು ಎಳೆ ಮಾತ್ರ ಕಟ್ಟಾಗಿದು, ಹಾಗೆ ಇರುತ್ತದೆ ಎಂದರೆ ನಿಜ.

ಸದರಿ ಚೈನನ್ನು ಪೋಲಿಸರು ಸೀಲು ಹಾಗು ಸಿಕ್ಕಾ ಹಾಕಿ ಕೊಡಲಿಲ್ಲ, ಹೇಗೆ ಕೊಟ್ಟರು ಎಂದು ಸಧ್ಯಕ್ಕೆ ನೆನಪಿಲ್ಲ. ನಿಪಿ 2 ರಂತೆ ಇರುವ ಛಾಯಾ ಚಿತ್ರದಲ್ಲಿ ತೋರಿಸಿದ ಹಾಗೆ ನನಗೆ ಸದರಿ ಚೈನನ್ನು ನೀಡಿರುತ್ತಾರೆ. ಈ ರೀತಿ ಚೈನುಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ.

ನನ್ನ ಮನೆಯ ಸುತ್ತಮುತ್ತಲು ಕಂಪೌಂಡ ಗೋಡೆ ಇದ್ದು ಎದುರಿಗೆ ಮಾತ್ರ ಗೇಟ ಇದೆ ಎಂದರೆ ನಿಜ. ಯಾರೆ ಬಂದರೂ ಸಹ ಹಿತ್ತಲು ಜಾಗೆಯಿಂದ ಓಡಲು ಸಾಧ್ಯವಿಲ್ಲ ಕಾರಣ ಎಂದರೆ ಕಂಪೌಂಡ ಇದೆ ಎಂದರೆ ನಿಜ.

ಪೋಲಿಸರು ನನಗೆ ಠಾಣೆಯಲ್ಲಿ ಆರೋಪಿತರನ್ನು ತೋರಿಸಿಲ್ಲ ಮತ್ತು ಅವರನ್ನು ಗುರುತಿಸಲು ನನಗೆ ಕರೆದಿಲ್ಲ. ಬಂಗಾರದ ಚೈನನ ರಶೀದಿ ಹಾಗು ಖರೀದಿ ಮಾಡಿರುವ ಯಾವ ದಾಖಲೆಗಳನ್ನು ಪೋಲಿಸರು ನನಗೆ ಕೇಳಿಲ್ಲ ಹಾಗು ನಾನು ಕೊಟ್ಟಿಲ್ಲ. ಸದರಿ ದಿನಾಂಕದಂದು ನನ್ನದು ಯಾವ ಮೀಟಿಂಗ ಇರಲಿಲ್ಲ, ಆ ದಿನಾಂಕದಂದು ನನ್ನ ಚೈನು ಯಾರೂ ಕಿತ್ತುಕೊಂಡಿಲ್ಲ ಮತ್ತು ಆರೋಪಿತರಿಗೂ ಸದರಿ ಘಟನೆಗೂ ಯಾವ ಸಂಬಂಧ ಇಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

**ಮರು ವಿಚಾರಣೆಃ ಮಾನ್ಯ ಎಪಿಪಿಯವರಿಂದ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪೋಲಿಸರು ಆರೋಪಿತರನ್ನು ತೋರಿಸಿದ್ದಾರೆ ಅವರನ್ನು ನಾನು ಗುರುತಿಸಿರುತ್ತೇನೆ ಎಂದು ಹೇಳಿದ್ದು, ಈಗ ಮಾಡಿದ ಪಾಟೀ ಸವಾಲಿನಲ್ಲಿ ಪೋಲಿಸರು ಆರೋಪಿತರನ್ನು ತೋರಿಸಿಲ್ಲ ಎಂದು ಹೇಳಿದ್ದು, ಈ ಎರಡು ಪ್ರಶ್ನೆಗಳಲ್ಲಿ ಯಾವದ್ದು ನಿಜ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನನಗೆ ನೆನಪಿಲ್ಲ ಎಂದು ಉತ್ತರ ನೀಡುತ್ತಾರೆ.

ಸದರಿ ಗುರುತಿನ ಕುರಿತು ಮಾನ್ಯ ಎಪಿಪಿಯವರು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಬೇಕೆಂದು ಕೇಳಿದ್ದು, ಮುಖ್ಯ ವಿಚಾರಣೆಯಲ್ಲಿ ಗುರುತಿನ ಕುರಿತು ಸಾಕ್ಷಿದಾರರು ಈಗಾಗಲೇ ಹೇಳಿದ್ದು ಇರುತ್ತದೆ ಆದ್ದರಿಂದ ಪಾಟೀ ಸವಾಲು ಮಾಡುವ ಪ್ರಮೇಯವೇ ಬರುವುದಿಲ್ಲ ಎಂದು ಮಾನ್ಯ ಎಪಿಪಿಯವರ ವಿನಂತಿಯನ್ನು ತಿರಸ್ಕರಿಸಲಾಯಿತು.

**(ಆರೋಪಿ ನಂಬರ 2 ಇವರು ಸದರಿ ಪಾಟೀ ಸವಾಲನ್ನು ಅನುಮೋದಿಸುವುದಾಗಿ ಹೇಳಿರುತ್ತಾರೆ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ, ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ. ಧಾರವಾಡ.